## ದಿನಾಂಕ 14 ನೇ ಜುಲೈ, 2023 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು- ಆರೋಪಿ ಪರ ವಕೀಲರಿಂದ ಃ -

ನಾನು ಗೃಹಿಣಿ. ನನ್ನ ಪತಿ ದಿನಾಂಕ 26.04.2019 ರಂದು ಮೃತರಾಗಿರುತ್ತಾರೆ. ನನ್ನ ಪತಿಯ ಹೆಸರಿನಲ್ಲಿದ್ದ ತೋಟ ಹಾಗೂ ಮನೆಯನ್ನು ನನ್ನ ಹೆಸರಿಗೆ ಮಾಡಿಕೊಂಡಿರುತ್ತೇನೆ. ನನ್ನ ಪತಿಯು ಬ್ಯಾಂಕ್ ನಲ್ಲಿ ಇಟ್ಟಿದ್ದ ಚಿನ್ನ ಹಾಗೂ ಹಣವನ್ನು ಸಹ ನಾನು ಪಡೆದುಕೊಂಡಿರುತ್ತೇನೆ. 2019 ರಿಂದ ಆರೋಪಿ ನನಗೆ ಪರಿಚಯ. ನಾನು, ಆರೋಪಿ, ಕವಿತ, ಕಾವೇರಮ್ಮರವರು ಎಲ್ ಎನ್ ಟಿ, ಪಿನ್ ಕೇರ್, ಸ್ವಗ್ರಹ ಸಂಘದಲ್ಲಿ ಇದ್ದೆವು ಎಂದರೆ ಸರಿ. ಸದರಿ ಸಂಘಗಳಲ್ಲಿ ನಾವು ಎಲ್ಲರೂ ಸಹ ರೂ 30 ಸಾವಿರ ಸಾಲ ಪಡೆದಿದ್ದೆವು ಎನ್ನುತ್ತಾರೆ. ನಾನು ಪಡೆದ ಸಂಘದ ಸಾಲಕ್ಕೆ ಆರೋಪಿ ಜಾಮೀನುದಾರಳಾಗಿದ್ದಳು ಎಂದರೆ ಸರಿಯಲ್ಲ, ನನ್ನ ಗಂಡ ಜಾಮೀನುದಾರರಾಗಿದ್ದರು ಎನ್ನುತ್ತಾರೆ. ನನ್ನ ಪತಿ ಮೃತರಾದ ನಂತರ ಸಾಲಗಳು ಮನ್ನವಾದವು ಎಂದರೆ ಸರಿ. ನಾವು ಸಂಘಕ್ಕೆ ಯಾವುದೆ ಚೆಕ್ ಗಳನ್ನು ನೀಡಿರುವುದಿಲ್ಲ ಎನ್ನುತ್ತಾರೆ.

ನಾನು ಯಾವುದೇ ಬ್ಯಾಂಕ್ ನಲ್ಲಿ ಸಾಲ ಪಡೆದಿಲ್ಲ. ಸಂಘದ ಸಾಲವನ್ನು ತೀರಿಸಿದ್ದೇನೆ ಎನ್ನುತ್ತಾರೆ. ನನಗೆ ಕೆನರಾ ಬ್ಯಾಂಕ್, ಯೂನಿಯನ್ ಬ್ಯಾಂಕ್ ಹಾಗೂ ಟೌನ್ ಬ್ಯಾಂಕ್ ಪೊನ್ನಂಪೇಟೆ ಶಾಖೆಯಲ್ಲಿ ಖಾತೆ ಇದೆ. ನನ್ನ ಗಂಡನಿಗೆ ಕೆನರಾ ಬ್ಯಾಂಕ್ ಹಾಗೂ ಯೂನಿಯನ್ ಬ್ಯಾಂಕ್ ನಲ್ಲಿ ಖಾತೆ ಇವೆ ಎನ್ನುತ್ತಾರೆ. 2019 ರ ಜುಲೈನಲ್ಲಿ ಆರೋಪಿಗೆ ಹಣ ನೀಡಿದ್ದೇನೆ ಆದರೆ ದಿನಾಂಕ ನೆನಪಿಲ್ಲ. ನಾವು ಮನೆಯನ್ನು 2017-18 ರಲ್ಲಿ ಮಾರಾಟ ಮಾಡಿರುತ್ತೇವೆ ಸದರಿ ಹಣ ಮನೆಯಲ್ಲಿ ಇತ್ತು ಅದನ್ನು ಆರೋಪಿಗೆ ನೀಡಿರುತ್ತೇನೆ. ಆನಂತರ ಹೊಸ ಮನೆಯನ್ನು 2017 ರಲ್ಲಿ ಕಟ್ಟಲು ಪ್ರಾರಂಭಿಸಿದೆವು. 1 ಕೋಟಿ 5 ಲಕ್ಷಕ್ಕೆ ನಮ್ಮ ಮನೆಯನ್ನು ಮಾರಾಟ ಮಾಡಿರುತ್ತೇವೆ. ಸದರಿ ಹಣದಲ್ಲಿ 20 ಲಕ್ಷ ಹಣವನ್ನು ಮನೆಯಲ್ಲೆ ಇಟ್ಟಿದ್ದೆವು ಎನ್ನುತ್ತಾರೆ. ಲಾಕ್ ಡೌನ್ ಸಂಧರ್ಭದಲ್ಲಿ ನನ್ನ ಪತಿ ಮೃತರಾಗಿರುತ್ತಾರೆ.

ನನ್ನ ಪತಿ ಮೃತರಾದ ನಂತರ ಆರೋಪಿಗೆ ಹಣ ನೀಡಿರುತ್ತೇನೆ. ಆರೋಪಿ 4 ತಿಂಗಳ ನಂತರ ಹಣ ವಾಪಸ್ ಮಾಡುತ್ತೇನೆ ಎಂದು ತಿಳಿಸಿದ್ದರು ಆದರೆ ವಾಪಸ್ ಮಾಡಲಿಲ್ಲ ಎನ್ನುತಾರೆ. ನಾನು ಹಲವು ಬಾರಿ ಹಣವನ್ನು ವಾಪಸ್ ಕೇಳಿರುತ್ತೇನೆ. ಈ ಬಗ್ಗೆ ಪೊಲೀಸರಿಗೆ ದೂರನ್ನು ನೀಡಿರುತ್ತೇನೆ. ಸದರಿ ದೂರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. 2019 ರಲ್ಲಿ

ದೂರನ್ನು ನೀಡಿರುತ್ತೇನೆ. ಆನಂತರ ಗೋಣಿಕೊಪ್ಪ ಸಿ ಪಿ ಐ ರವರಿಗೂ ದುರು ನೀಡಿರುತ್ತೇನೆ. ದೂರನ್ನು ಓದಿ ನೋಡಿರುತ್ತೇನೆ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಲಾಗಿ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ)

**ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.**

(ಸಾಕ್ಷಿಯವರ ಸಹಿ)

sd/-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.